ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY
ಯರಗೇರಾ–584133, ರಾಯಚೂರು, ಕರ್ನಾಟಕ, ಭಾರತ
Office No. +919141030953 ಪರೀಕ್ಷಾ ವಿಭಾಗ E-mail: registrarevrur@gmail.com

ಕ್ರ.ಸಂ: ರಾವಿರಾ/ಪರೀಕ್ಷಾ/ II, IV,VI/2024-25/ 472 ದಿನಾಂಕ:13.08.2024

**ಸ್ನಾತಕ(UG) II, IV ಮತ್ತು VIನೇ ಸೆಮಿಸ್ಟರ್‌ನ ಬಿಎ/ಬಿಕಾಂ/ಬಿಬಿಎ/ಬಿಸಿಎ/ಬಿಎಸ್ಸಿ ಪರೀಕ್ಷೆಗಳಲ್ಲಿ ಅನುಸರಿಸಬೇಕಾದ ಸೂಚನೆಗಳು.**

**ಪ್ರಾಂಶುಪಾಲರುಗಳಿಗೆ ಸೂಚನೆಗಳು**

1. ಪ್ರತಿದಿನ ಮೂರು ಸೆಶನ್‌ಗಳು ಇರುವುದರಿಂದ ಪ್ರತಿದಿನ ಬೆಳಿಗ್ಗೆ 8:00 ಗಂಟೆಗೆ ಎಲ್ಲಾ ಸೆಮಿಸ್ಟರ್‌ನ ಪ್ರಶ್ನೆ ಪತ್ರಿಕೆಗಳ ಎಲ್ಲಾ ಬಂಡಲ್‌ಗಳನ್ನು ತರಬೇಕು. ಹಾಗೆಯೆ 6:00 ಗಂಟೆಗೆ ಉತ್ತರ ಪತ್ರಿಕೆಯ ಎಲ್ಲಾ ಬಂಡಲ್‌ಗಳನ್ನು ನೋಡಲ್ ಕೇಂದ್ರಕ್ಕೆ ತಲುಪಿಸತಕ್ಕದ್ದು.
2. ಪ್ರತಿ ದಿನ ಪ್ರತಿ ಪರೀಕ್ಷಾ ಕೇಂದ್ರದಲ್ಲಿ ಆ ದಿನ ನಡೆಯುವ ಎಲ್ಲಾ ಪ್ರಶ್ನೆ ಪತ್ರಿಕೆಗಳನ್ನು ಹೆಚ್ಚುವರಿಯಾಗಿ ಪ್ಯಾಕ್ ಮಾಡಿ ನೀಡಲಾಗಿದೆ. (ಪ್ಯಾಕ್ ಮೇಲೆ Exam centre copyes ಎಂದು ನಮೂದಿಸಲಾಗಿದೆ.) ಪ್ರಾಂಶುಪಾಲರು ಪರಿಶೀಲಿಸಿ ಅಗತ್ಯ ವಿದ್ದರೆ ಮಾತ್ರ ಪ್ರಶ್ನೆ ಪತ್ರಿಕೆಗಳ ಪ್ಯಾಕ್ ಒಪನ್ ಮಾಡಿ ವಿದ್ಯಾರ್ಥಿಗಳಿಗೆ ವಿತರಿಸತಕ್ಕದ್ದು.
3. ಅರ್ಹತೆ ಹೊಂದಿರುವ ವಿದ್ಯಾರ್ಥಿಗಳ ಹಾಜರಾತಿ/ I.A ಅಂಕಗಳನ್ನು ಕಡ್ಡಾಯವಾಗಿ ನಮೂದಿಸಲೇಬೇಕು. ನಮೂದಿಸದಿದ್ದರೆ ಅಥವಾ ತಡವಾಗಿ I.A ಅಂಕಗಳನ್ನು ಹಾಕಿದರೆ ವಿಷಯ ಉಪನ್ಯಾಸಕ, HOD, ಕಾಲೇಜಿನ ಮೇಲೆ ಪ್ರತಿ ವಿದ್ಯಾರ್ಥಿಗೆ 200/- ರೂಪಾಯಿಗಳ ದಂಡವನ್ನು ವಿಧಿಸಲಾಗುವುದು. ಈ ಮಾಹಿತಿಯನ್ನು ಪ್ರಾಂಶುಪಾಲರು HODಗೆ ತಿಳಿಯಪಡಿಸತಕ್ಕದ್ದು.
4. ಕೇವಲ ಆಂತರಿಕ ಅಂಕಗಳನ್ನು ಹೊಂದಿರುವ ವಿಷಯಗಳಾದ NSS/NCC/Sports ಆಂತರಿಕ ಅಂಕಗಳನ್ನು ಕಡ್ಡಾಯವಾಗಿ UUCMS ನಲ್ಲಿ ನಮೂದಿಸಬೇಕು. ಇಲ್ಲದಿದ್ದರೆ ವಿದ್ಯಾರ್ಥಿಗಳ ಫಲಿತಾಂಶ ಬರುವುದಿಲ್ಲ.
5. ಲಿಖಿತ ಪರೀಕ್ಷಾ ನಡೆದ ದಿನವೇ ಹಾಜರಾತಿಯನ್ನು ಅಪಡೇಟ್ ಮಾಡಬೇಕು. ಹಾಜರಾತಿಯನ್ನು ಹಾಕುವಾಗ ತಪ್ಪಾಗಿ ಹಾಕಿದರೆ ಅ ಕಾಲೇಜಿನ ಪ್ರಾಂಶುಪಾಲರೇ ನೇರ ಹೊಣೆಗಾರರಾಗುತ್ತಾರೆ.
6. OMR ಶೀಟ್ ಭರ್ತಿ ಮಾಡುವಾಗ ಎಚ್ಚರಿಕೆಯಿಂದ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿ ನೊಂದಣಿ ಸಂಖ್ಯೆಯನ್ನು ಸರಿಯಾಗಿ ಬಬ್ಲಿಂಗ್(Bubbling) ಮಾಡಬೇಕು. ಇಲ್ಲದಿದ್ದರೆ ಫಲಿತಾಂಶವು ಪ್ರಕಟವಾಗುವುದಿಲ್ಲ.
7. ಲಿಖಿತ ಪರೀಕ್ಷಾ ನಡೆದ ದಿನವೇ MPC ಆದ ವಿದ್ಯಾರ್ಥಿಗಳ ಹಾಜರಾತಿಯನ್ನು ಕಡ್ಡಾಯವಾಗಿ UUCMS ನಲ್ಲಿ ಪ್ರಾಂಶುಪಾಲರು ದಿನವೇ ಅಪಡೇಟ್ ಮಾಡಬೇಕು.
8. MPC ಆದ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳನ್ನು ಪ್ರತ್ಯೇಕವಾಗಿ ಸಂಗ್ರಹಿಸಿ ಸೀಲ್ ಮಾಡಿ ಕಳುಹಿಸಬೇಕು. ಇಲ್ಲವಾದಲ್ಲಿ ಅಂತಹ ಪ್ರಾಂಶುಪಾಲರುಗಳಿಗೆ 1000 ರೂಪಾಯಿಗಳ ದಂಡವನ್ನು ವಿಧಿಸಲಾಗುವುದು.
9. ಕಾಲೇಜಿನ ಬಿಲ್‌ಗಳನ್ನು ಸಲ್ಲಿಸುವಾಗ 'A' Formನ್ನು ಉಪನ್ಯಾಸಕರ ಪಟ್ಟಿಯಂತೆ ಜೋಡಿಸಿ ಒಂದು ತಿಂಗಳೊಳಗೆ ಮೌಲ್ಯಮಾಪನ ವಿಭಾಗಕ್ಕೆ ಕಡ್ಡಾಯವಾಗಿ ಸಲ್ಲಿಸಬೇಕು.
10. ಕಾಲೇಜಿನ ಸ್ಟೇಷನರಿ ಬಿಲ್‌ಗಳು ಕಡ್ಡಾಯವಾಗಿ GST ಹೊಂದಿರುವ ಬಿಲ್‌ಗಳನ್ನು ಕಳುಹಿಸಬೇಕು. ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಬಿಲ್‌ಗಳನ್ನು ಕಳುಹಿಸಬೇಕು.
11. ಕಿರಿಯ ಮೇಲ್ವಿಚಾರಕರನ್ನು ಹಾಕುವಾಗ ಅ ದಿನ ವಿಷಯ ಹೊಂದಿರುವ ಉಪನ್ಯಾಸಕರನ್ನು ಆ ಕೊಠಡಿಗೆ ನಿಯೋಜಿಸಬಾರದು.
12. ಕಡ್ಡಾಯವಾಗಿ ಕಿರಿಯ ಮೇಲ್ವಿಚಾರಕರು ಹಾಗೂ ವಿದ್ಯಾರ್ಥಿಗಳು ಯಾವುದೇ ಸ್ಮಾರ್ಟ್‌ಫೋನ್‌ನ್ನು ಪರೀಕ್ಷೆ ನಡೆಯುವ ಕೊಠಡಿಯಲ್ಲಿ ಇಡಬಾರದು.ಇಟ್ಟರೆ ಕಿರಿಯ ಮೇಲ್ವಿಚಾರಕರ ಮೇಲೆ ಹಾಗೂ ವಿದ್ಯಾರ್ಥಿಗಳ ಮೇಲೆ ರಾಯಚೂರು ವಿಶ್ವವಿದ್ಯಾಲಯದ ಪರೀಕ್ಷಾ ನಿಯಮಾವಳಿ ಅನ್ವಯ ಕ್ರಮ ಜರುಗಿಸಲಾಗುವುದು.

13. ವಿದ್ಯಾರ್ಥಿಗಳು ಕಡ್ಡಾಯವಾಗಿ ಪ್ರವೇಶ ಪತ್ರ ಮತ್ತು ಕಾಲೇಜಿನ ಗುರುತಿನ ಚೀಟಿ ಜೊತೆಗೆ ಮಾನ್ಯತೆ ಇರುವ ಯಾವುದಾದರೊಂದು ಗುರುತಿನ ಚೀಟಿ(ಆಧಾರ್‌ಕಾರ್ಡ್, ಪಾನ್‌ಕಾರ್ಡ್, ಮತದಾರರ ಗುರುತಿನ ಚೀಟಿ) ಹಾಜರುಪಡಿಸಿದರೆ ಮಾತ್ರ ವಿದ್ಯಾರ್ಥಿಗಳನ್ನು ಪರೀಕ್ಷೆ ಬರೆಯಲು ಅನುಮತಿಸಲಾಗುವುದು.

**ಸೂಚನೆ: ಮೇಲಿನ ಎಲ್ಲಾ ನಿಯಮಗಳನ್ನು ಸ್ನಾತಕ(UG) ಕಾಲೇಜುಗಳ ಪ್ರಾಂಶುಪಾಲರು ಕಡ್ಡಾಯವಾಗಿ ಪಾಲಿಸಬೇಕೆಂದು ಸೂಚಿಸಲಾಗಿದೆ.**

(ಪ್ರೊ. ಯರಿಸ್ವಾಮಿ ಎಂ.)
ಕುಲಸಚಿವರು (ಮೌಲ್ಯಮಾಪನ)
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು